**ಮುಕ್ತವಾದ ವಾತಾವರಣದಲ್ಲಿ ಮಗುವಿನ ವ್ಯಕ್ತಿತ್ವ ಅರಳಬೇಕು ಎನ್ನುವುದರಲ್ಲಿ ಎರಡು ಮಾತಿಲ್ಲ. ಆದರೆ, ಮುಕ್ತತೆ ಅಥವಾ ಸ್ವಾತಂತ್ರ್ಯವನ್ನು ತಾನು ಹೇಗೆ ಬಳಸಿಕೊಂಡು ಜೀವನವನ್ನು ಸುಂದರಗೊಳಿಸಿಕೊಳ್ಳಬೇಕು ಎಂಬ ಬಗ್ಗೆಯೂ ಕೆಲವು ಮಾತುಗಳನ್ನು ಹೇಳಬೇಕಲ್ಲವೇ.**

ಪ್ರತ್ಯೇಕವಾದ ಕಾರ್ಯಕ್ರಮವೊಂದನ್ನು ಆಯೋಜಿಸಲಾಗುತ್ತದೆ. ಋತುಮತಿಯರಾಗುವ ಸಂದರ್ಭಗಳ ಕುರಿತ, ಋತುಮತಿಯರಾದ ಬಳಿಕ ಗಮನಿಸಬೇಕಾದ ವಿಷಯಗಳ ಕುರಿತು, ಹಾರ್ಮೋನಿನ ಬದಲಾವಣೆಗಳಿಂದ ದೈಹಿಕವಾಗಿ ಉಂಟಾಗುವ ಪರಿಣಾಮಗಳ ಕುರಿತು ಬೋಧಕರು ಅಥವಾ ತರಬೇತುದಾರರು ಮಕ್ಕಳಿಗೆ ವಿವರಿಸುವುದುಂಟು. ಹುಡುಗಿಯರನ್ನು ಪ್ರತ್ಯೇಕವಾಗಿ ಕೊಠಡಿಯಲ್ಲಿ ಕುಳ್ಳಿರಿಸಿ, ವೈದ್ಯೆಯರನ್ನು ಕರೆಸಿ, ಉಪನ್ಯಾಸಗಳನ್ನು ಏರ್ಪಾಡಿಸಲಾಗುತ್ತದೆ. ಮುಟ್ಟಿನ ಸಂದರ್ಭವನ್ನು ನಿರ್ವಹಿಸುವ ಭಾಷಣಗಳನ್ನು ಹುಡುಗಿಯರು ಅನೇಕ ಬಾರಿ ಕೇಳಿಸಿಕೊಳ್ಳುತ್ತಾರೆ. ಹುಡುಗಿ ಋತುಮತಿಯಾದ ಸಂದರ್ಭದಲ್ಲಂತೂ ಮನೆಯಲ್ಲಿಯೂ ಆಕೆಗೆ ಇಂತಹ ಪುಟ್ಟ ಪುಟ್ಟ ಬೋಧನೆಗಳನ್ನು ಅಮ್ಮ–ಅಪ್ಪ, ಅಜ್ಜಿ, ದೊಡ್ಡಮ್ಮ, ಅತ್ತೆ ನೀಡುತ್ತಲೇ ಇರುತ್ತಾರೆ. ಹೀಗೆ ಹೆಣ್ಣುಮಕ್ಕಳು ಅನೇಕ ರೀತಿಯ ಬೋಧನೆಗಳು, ಮಾರ್ಗದರ್ಶನಗಳು ಮತ್ತು ಉಪನ್ಯಾಸಗಳ ನಡುವೆಯೇ ಹದಿಹರೆಯವನ್ನು ಪ್ರವೇಶಿಸುತ್ತಾರೆ. ಇವೆಲ್ಲವೂ ಖಂಡಿತವಾಗಿಯೂ ಮುಖ್ಯವಾದವು. ಸಕಾರಾತ್ಮಕವಾದ ಈ ಮಾರ್ಗದರ್ಶನಗಳು ಅವರಿಗೆ ತಮ್ಮ ದೇಹ ಮತ್ತು ಮನಸ್ಸನ್ನು ನಿರ್ವಹಿಸಲು ಬೇಕಾದ ತಿಳಿವಳಿಕೆಯನ್ನು ನೀಡುತ್ತವೆ.

'ಮುಟ್ಟು ಚಿಟ್ಟುಗಳೆಲ್ಲವೂ ಬದುಕಿನ ಜೈವಿಕ ಅಂಶಗಳು. ಆ ವಿಚಾರಕ್ಕೆ ಮನಸ್ಸನ್ನು ಮುದುಡಿಸಿಕೊಳ್ಳದೆ, ಬದುಕನ್ನು ನೀನು ಹುಡುಗರಂತೆಯೇ ಧೈರ್ಯವಾಗಿ ಎದುರಿಸುತ್ತ ಮುನ್ನಡೆಯಬೇಕು' ಎನ್ನುವಂತಹ ಮಾತು ದೈಹಿಕ ಬದಲಾವಣೆ ಹಂತ ಪ್ರವೇಶಿಸಿದ ಹುಡುಗಿಯೊಬ್ಬಳಲ್ಲಿ ಆತ್ಮವಿಶ್ವಾಸವನ್ನು ವೃದ್ಧಿಸಬಲ್ಲವು. ದೈಹಿಕ ಸ್ಥಿತ್ಯಂತರಕ್ಕೆ ಹುಡುಗಿಯರನ್ನು ಸಜ್ಜುಗೊಳಿಸುವ ಕೌಟುಂಬ ಹಾಗೂ ಶೈಕ್ಷಣಿಕ ವ್ಯವಸ್ಥೆ ಹುಡುಗರ ಬಗ್ಗೆ ಹೆಚ್ಚು ತಲೆಕೆಡಿಸಿಕೊಳ್ಳುವುದಿಲ್ಲ. ಹುಡುಗನೊಬ್ಬ ಹದಿಹರೆಯವನ್ನು ಪ್ರವೇಶಿಸುವಾಗ, ಆತನಿಗೆ ದೊರೆಯುವ ಮಾರ್ಗದರ್ಶನ ಪರೋಕ್ಷವಾಗಿರುತ್ತದೆ.

ಅಕ್ಕ ಅಥವಾ ತಂಗಿಗೆ ಹೇಳುವ ಬೈಗುಳಗಳಲ್ಲಿಯೇ ಹುಡುಗನಿಗೆ ಪರೋಕ್ಷ ಸೂಚನೆಗಳು ದೊರೆತುಬಿಡುತ್ತವೆ. 'ಏ ಪುಟ್ಟೀ, ನೀನು ಬೇಗ ಮನೆಗೆ ಬಾ ಮಾರಾಯ್ತೀ, ಅವನು ಹುಡುಗ, ಅವನ ಆಟ ಮುಗಿಯುವುದನ್ನು ಕಾಯ್ತಾ ಗ್ರೌಂಡಿನಲ್ಲಿಯೇ ಕತ್ತೆ ತಿಮ್ಮಿ ತರ ತಿರುಗಾಡಬೇಡಾ' ಎಂಬ ಮಾತಿನಲ್ಲಿ ಮಗ ಹೇಗೆ ಬೇಕಾದರೂ ತಿರುಗಾಡಬಹುದು ಎನ್ನುವ ಇಂಗಿತವೂ ಇದೆ ಅಲ್ಲವೇ. ಹದಿಹರೆಯದ ಹುಡುಗರಿಗೆ ದೊರೆಯುವ ಮಾರ್ಗದರ್ಶನ ಹೀಗೆ ಪರೋಕ್ಷವಾಗಿ, ಬಹಳ ಸೀಮಿತವಾದ ಮಾತುಗಳಲ್ಲೇ ಇರುತ್ತದೆ. ಅಂಥ ಮಾತುಗಳ ಮೂಲಕವೇ ಅವರಿಗೆ ಯಥೇಚ್ಛ ಸ್ವಾತಂತ್ರ್ಯ ದೊರೆಯುತ್ತದೆ. ಮುಕ್ತವಾದ ವಾತಾವರಣದಲ್ಲಿ ಮಗುವಿನ ವ್ಯಕ್ತಿತ್ವ ಅರಳಬೇಕು ಎನ್ನುವುದರಲ್ಲಿ ಎರಡು ಮಾತಿಲ್ಲ. ಆದರೆ, ಮುಕ್ತತೆ ಅಥವಾ ಸ್ವಾತಂತ್ರ್ಯವನ್ನು ತಾನು ಹೇಗೆ ಬಳಸಿಕೊಂಡು ಜೀವನವನ್ನು ಸುಂದರಗೊಳಿಸಿಕೊಳ್ಳಬೇಕು ಎಂಬ ಬಗ್ಗೆಯೂ ಕೆಲವು ಮಾತುಗಳನ್ನು ಹೇಳಬೇಕಲ್ಲವೇ. ಮುಕ್ತ ವಾತಾವರಣದಲ್ಲಿ ತನ್ನ ವರ್ತನೆಯು ಇನ್ನೊಂದು ಜೀವಿಗೆ ಹಾನಿ ಮಾಡಬಾರದು ಎಂಬ ಎಚ್ಚರಿಕೆಯನ್ನು ಬಾಲಕನಲ್ಲಿ ಮೂಡಿಸುವುವುದು ಬಹಳ ಮುಖ್ಯ. ವಿಶಾಲವಾದ ಸ್ವಾತಂತ್ರ್ಯದ ಬಯಲಿನಲ್ಲಿ ಇನ್ನೊಂದು ಜೀವಿಯೂ ತನ್ನಷ್ಟೇ ಮುಕ್ತವಾಗಿ ಸುಂದರವಾಗಿ ಬಾಳುವೆ ಮಾಡಬೇಕು ಎಂಬ ಪ್ರಜ್ಞೆಯನ್ನು ಮೂಡಿಸುವಂತಹ ವ್ಯವಸ್ಥೆಯೊಂದು ರೂಪುಗೊಂಡಾಗ ಮಾತ್ರ ಸಮಸಮಾಜವನ್ನು ಕಟ್ಟುವುದು ಸಾಧ್ಯವಾಗುತ್ತದೆ.

ತನ್ನ ವರ್ತನೆಯಿಂದ ಸಹಜೀವಿಗೆ ನೋವುಂಟಾಗಬಾರದು ಎನ್ನುವ ಪ್ರಜ್ಞೆಯನ್ನು ಗಂಡು ಮತ್ತು ಹೆಣ್ಣಿನಲ್ಲಿ ಮೂಡಿಸುವ ವ್ಯವಸ್ಥೆ ರೂಪುಗೊಳ್ಳಬೇಕು ಎಂಬ ಆಗ್ರಹವನ್ನು

